ಎಂವಿಸಿ 730/2016 ಪಿ ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಡಿ ಎಸ್ ಕೃಷ್ಣಮೂರ್ತಿ

ದಿನಾಂಕ 26-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಬಿ ಜಿ ವಕೀಲರಿಂದ,

1) ಸಾಕ್ಷಿಯು ಪ್ರ.ವ.ವರದಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು,

2) ಪಿರ್ಯಾದುವಿನ ದೂರಿನ ದೃಡೀಕೃತ ಪ್ರತಿಯನ್ನು ನಿಪಿ 2 ಎಂದು,

3) ಗಾಯದ ಪ್ರಮಾಣ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ 3 ಎಂದು,

4) ಸ್ಥಳ ಮಹಜರ್ ನ ದೃಡೀಕೃತ ಪ್ರತಿಯನ್ನು ನಿಪಿ 4 ಎಂದು,

5) ಐಎಂವಿ ವರದಿ ದೃಡೀಕೃತ ಪ್ರತಿಯನ್ನು ನಿಪಿ 5 ಎಂದು,

6) ಅಪರಾಧ ಸಂಖ್ಯೆ 427/15 ರಲ್ಲಿನ ದೋಷಾರೋಪಣ ಪಟ್ಟಿಯ ದೃಡೀಕೃತ ಪ್ರತಿಯನ್ನು ನಿಪಿ 6 ಎಂದು,

7) ಬಿಜಿಎಸ್ ಅಪೊಲೋ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ 7 ಎಂದು,

8) ಸೆಂಟ್ ಫಿಲೋಮಿನಾ ಪ್ರೌಢಶಾಲೆ ಬೆಂಗಳೂರಿನವರು ನೀಡಿದ ಅರ್ಜಿದಾರರ ವಯಸ್ಸಿನ ಪ್ರಮಾಣ ಪತ್ರವನ್ನು ನಿಪಿ 8 ಎಂದು,

9) ಅರ್ಜಿದಾರರ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನಿಪಿ 9 ಎಂದು,

10) ಅರ್ಜಿದಾರರ ಮುಂದುವರೆದ ಶಸ್ತ್ರ ಚಿಕಿತ್ಸಾ ವೆಚ್ಚವಾಗಿ ಅಂದಾಜು ಎರಡು ಲಕ್ಷ ಬೇಕಾಗಿರುತ್ತದೆ ಎಂಬುದರ ಬಗ್ಗೆ ನೀಡಿದ ವೈದ್ಯಕೀಯಪ್ರಮಾಣ ಪತ್ರವನ್ನು ನಿಪಿ 10 ಎಂದು,

11) ಒಟ್ಟು 41 ವೈದ್ಯಕೀಯ ಬಿಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 11 ಎಂದು,

12) 19 ವೈದ್ಯಕೀಯ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ 12 ಎಂದು,

13) 23 ಪೋಟೋ ಹಾಗೂ ಅದಕ್ಕೆ ಸಂಬಂಧಪಟ್ಟ ಸಿಡಿಯನ್ನು ನಿಪಿ 13 ಮತ್ತು 14 ಎಂದು,

14) 22 ಪೋಟೋ ಹಾಗೂ ಅದಕ್ಕೆ ಸಂಬಂಧಪಟ್ಟ ಸಿಡಿಯನ್ನು ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು.

ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ಶ್ರೀ ಬಿ ಜಿ ಕೆ ವಕೀಲರಿಂದ,

1) ಅಪಘಾತವಾದ ಸಮಯದಲ್ಲಿ ನನ್ನ ಮಗ ಎಲ್ ಕೆ ಜಿ ಯಲ್ಲಿ ಓದುತ್ತಿದ್ದ. ಈಗ ನನ್ನ ಮಗ ಆರನೇ ತರಗತಿಯಲ್ಲಿ ಓದುತ್ತಿದ್ದಾನೆ. ಈ ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಈ ಅಪಘಾತ ಸಮಯದಲ್ಲಿ ನಾನು ಅವನ ಜೊತೆ ಇದ್ದೆ. ಅಪಘಾತವಾದ ನಂತರ ನಾನು ಮಗುವಿನ ಜೊತೆ ಆಸ್ಪತ್ರೆಯಲ್ಲಿ ಇದ್ದುದ್ದರಿಂದ ನಾನು ದೂರನ್ನು ನೀಡಿರುವುದಿಲ್ಲ. ಲಾರಿ ಈ ಅಪಘಾತವನ್ನು ಪಡಿಸಿರುತ್ತದೆ. ನನ್ನ ಮಗ ಲಾರಿಯ ಹುಕ್ಕಿಗೆ ಸಿಕ್ಕಿ ಲಾರಿಯ ಟೈರ್ ಅಡಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ.

2) ಅಪಘಾತವಾದ ನಂತರ ಮೊದಲು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ನನ್ನ ಮಗ ಸುಮಾರು 21 ದಿನಗಳ ಕಾಲ ಎರಡು ಅವಧಿಯಲ್ಲಿ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ. ಎಸ್.ನಾರಾಯಣ್ ಎಂಬ ವೈದ್ಯರು ನನ್ನ ಮಗನಿಗೆ ಚಿಕಿತ್ಸೆ ನೀಡಿರುತ್ತಾರೆ. ನನ್ನ ಮಗ ಗುಣಮುಖ ಆದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾನೆ ಎನ್ನುತ್ತಾರೆ. ಸುಮಾರು ಆರು ತಿಂಗಳ ಹಿಂದೆ ನನ್ನ ಮಗನನ್ನು ಕೊನೆಯ ಬಾರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. 2018 ರಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆದಿರುತ್ತಾನೆ ಇದನ್ನು ಹೊರತುಪಡಿಸಿ ಅಧಿಕೃತ ಸರ್ಕಾರಿ ವೈದ್ಯಕೀಯ ಅಧಿಕಾರಿಗಳಿಂದ ಬೇರೆ ಅಂಗ ನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ .

3) ನನ್ನ ಮಗನನ್ನು ಚಿಕಿತ್ಸೆಗೆ ಕರೆದುಕೊಂಡು ಹೋದಾಗ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಲು ತಿಳಿಸಿದ್ದು ಅದಕ್ಕೆ ತಗಲುವ ವೆಚ್ಚದ ಬಗ್ಗೆ ಕೇಳಿದಾಗ ಅವರು ಲಿಖಿತವಾಗಿ ಪತ್ರವನ್ನು ನೀಡಿರುತ್ತಾರೆ ಈ ಪ್ರಕರಣಕೋಸ್ಕರ ವೈದ್ಯರಿಂದ ಸುಳ್ಳು ವೈದ್ಯಕೀಯ ವೆಚ್ಚ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ನಾನು 10 ಲಕ್ಷ ರೂ ಗಳನ್ನು ವೈದ್ಯಕೀಯ ವೆಚ್ಚ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಷ್ಟು ಖರ್ಚು ವೆಚ್ಚ ಆಗದೇ ಇದ್ದರೂ ಸಹ ಹೆಚ್ಚಿನ ಪರಿಹಾರದ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಆರೋಗ್ಯ ಚೆನ್ನಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಕೆ.ಆರ್.ನಗರ.